# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 246 |
| 2 | ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 04.03.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರೈತರು ತಮ್ಮ ಜಮೀನುಗಳ ಸರ್ವೇ ಕಾರ್ಯಕ್ಕೆ ಶುಲ್ಕ ಪಾವತಿಸಿ, ಸಲ್ಲಿಸಲಾಗಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಪ್ರಸಕ್ತ ಸಾಲಿನಲ್ಲಿ ಮಾಹೆ ಏಪ್ರಿಲ್-2019 ರಿಂದ ಮಾಹೆ ಜನವರಿ-2020 ರ ಅಂತ್ಯದವರೆಗೆ ರಾಜ್ಯಾದ್ಯಂತ ಸರ್ವೆಗಾಗಿ 8,10,080 ಅರ್ಜಿಗಳು ಸಲ್ಲಿಕೆಯಾಗಿದ್ದು ಈ ಪೈಕಿ ವಿಲೆ ಪಡಿಸಿರುವ ಮತ್ತು ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಗಿನಂತಿರುತ್ತದೆ.<br><br>ಆ.ಶಿಲ್ಕು: 398272; ಸ್ವೀಕೃತಿ: 810080; ಒಟ್ಟು: 1208352; ವಿಲೇ: 846257; ಒಟ್ಟು ಬಾಕಿ: 362095; ಕಂದಾಯ ಶಾಖೆಯಲ್ಲಿ ಬಾಕಿ: 208370; ಭೂಮಾಪನ ಶಾಖೆಯಲ್ಲಿ ಬಾಕಿ: 153725<br><br>ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿದ ಸರ್ವೇ ಕಾರ್ಯವನ್ನು ಪೂರ್ಣಗೊಳಿಸಲು ಇಲಾಖೆಯಲ್ಲಿನ ಮಾರ್ಗಸೂಚಿಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ ಸಾರ್ವಜನಿಕರು ತಮ್ಮ ಜಮೀನಿನ ಅಳತೆಯ ಕುರಿತು ಸಂಬಂಧಿಸಿದ ಹೋಬಳಿ ಮಟ್ಟದಲ್ಲಿ ಅಟಲ್‌ಜಿ ಜನಸ್ನೇಹಿ ಕೇಂದ್ರದಲ್ಲಿ ನಿಗದಿತ ಅಳತೆಶುಲ್ಕ, ಜಮೀನಿನ ವಿವರದೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಈ ರೀತಿಯಾಗಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳಲ್ಲಿ ಮೋಜಣಿ ತಂತ್ರಾಂಶದಲ್ಲಿ ಸ್ವೀಕರಿಸಲಾಗುತ್ತಿದ್ದು, ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ,<br><br>ಸದರಿ ಜಮೀನಿನ ಪಹಣಿ ಮತ್ತು ಆಕಾರಬಂದು ಕ್ಷೇತ್ರದ ವಿವರ ತಾಳೆಯಾಗಿ, ಸಂಬಂಧಿಸಿದ ಭೂದಾಖಲೆಗಳು ಲಭ್ಯವಿದ್ದಲ್ಲಿ, ಅಳತೆಗಾಗಿ ಸಂಬಂಧಿಸಿದಂತೆ ಭೂಮಾಪಕರಿಗೆ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್‌ನಲ್ಲೇ ನಿರ್ವಹಿಸಲಾಗುತ್ತಿದೆ.<br><br>ಒಂದು ವೇಳೆ ಜಮೀನಿನ ಪಹಣಿ ಮತ್ತು ಆಕಾರಬಂದು ಕ್ಷೇತ್ರದಲ್ಲಿ ವ್ಯತ್ಯಾಸವಿದ್ದಲ್ಲಿ ಪಹಣಿ ತಿದ್ದುಪಡಿಗಾಗಿ ಪ್ರಕರಣವನ್ನು ಕಂದಾಯ ಶಾಖೆಗೆ ಆನ್‌ಲೈನ್‌ನಲ್ಲೇ ವರ್ಗಾಯಿಸಲಾಗುತ್ತಿದೆ ಮತ್ತು ಒಂದು ವೇಳೆ ಜಮೀನಿನ ಭೂದಾಖಲೆಗಳು ಶಿಥಿಲವಾಗಿದ್ದಲ್ಲಿ/ಲಭ್ಯವಾಗದೆ ಇದ್ದಲ್ಲಿ ಅಂತಹ ದಾಖಲೆ ಗಳನ್ನು ಪುನರ್ ನಿರ್ಮಾಣ ಮಾಡಿ ದೃಢೀಕರಿಸುವ ಕುರಿತು ಭೂದಾಖಲೆಗಳ ಉಪ ನಿರ್ದೇಶಕರಿಗೆ ಪ್ರಕರಣವನ್ನು ಆನ್‌ಲೈನ್‌ನಲ್ಲೇ ರವಾನಿಸಲಾಗಿರುತ್ತದೆ.<br><br>ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸ ಲಾಗಿದ್ದು, ಯಾವುದೇ ಹಂತದಲ್ಲಿ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸ ಲಾಗುತ್ತಿದೆ. ಹಾಗೂ ಪಹಣಿ ತಿದ್ದುಪಡಿ, ಇತ್ಯಾದಿ ತಾಂತ್ರಿಕ ನ್ಯೂನ್ಯತೆಗಳಿಲ್ಲದ ಪ್ರಕರಣಗಳನ್ನು 30 ದಿನಗಳ ಒಳಗಾಗಿ ವಿಲೇಪಡಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. |

| | | |
|---|---|---|
| ಇ) | ಸರ್ವೇ ಕಾರ್ಯ ವಿಳಂಬದಿಂದಾಗಿ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಈ) | ಹಾಗಿದ್ದಲ್ಲಿ, ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | **ಅಳತೆ ಕಾರ್ಯದಲ್ಲಿ ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳು**<br>ಭೂಮಾಪನ ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ಲೈನ್ನಲ್ಲಿ ಸ್ವೀಕರಿಸಲಾಗುತ್ತಿದ್ದು. ಅಳತೆಗಾಗಿ ಸಂಬಂಧಿಸಿದ ಭೂಮಾಪಕರಿಗೆ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್‌ನಲ್ಲೇ ನಿರ್ವಹಿಸಲಾಗುತ್ತಿದೆ.<br>ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದ್ದು ಯಾವುದೇ ಹಂತದಲ್ಲಿ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.<br>ಇವುಗಳಲ್ಲದೆ ಪ್ರಗತಿ ಕುರಿತು ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ.<br>ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು. ಇದರಿಂದ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |
| ಉ) | ರಾಜ್ಯದಲ್ಲಿ ಭೂಮಾಪಕರ ಕೊರತೆ ಇದೆಯೇ; ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿರುವ ಭೂಮಾಪಕರ ಹುದ್ದೆಗಳ ವಿವರ<br><table><tr><td>ಮಂಜೂರಿ ಹುದ್ದೆಗಳು</td><td>ಭರ್ತಿಯಾದ ಹುದ್ದೆಗಳು</td><td>ಖಾಲಿ ಹುದ್ದೆಗಳು</td></tr><tr><td>4020</td><td>3723</td><td>297</td></tr></table><br>ಖಾಲಿ ಇಲಾಖೆಯಲ್ಲಿ 297 ಭೂಮಾಪಕರ ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಗ್ರೂಪ್ ಡಿ ಹುದ್ದೆಯಿಂದ ಮುಂಬಡ್ತಿಗೆ ಲಭ್ಯವಾಗುವ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಇನ್ನುಳಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು. |

ಸಂಖ್ಯೆ: ಕಂಇ 18 ಎಸ್‌ಎಸ್‌ಸಿ 2020

(ಆರ್. ಅಶೋಕ)
ಕಂದಾಯ ಸಚಿವರು

ಅನುಬಂಧ-1 LCQ 246

ರಾಜ್ಯಾದಂತ ಮಾಹೆ ಎಪ್ರಿಲ್-2019 ರಿಂದ ಮಾಹೆ ಜನವರಿ-2020 ರ ಅಂತ್ಯದ ವರೆಗೆ ಸ್ವೀಕೃತಿಯಾಗಿರುವ ಪ್ರಕರಣಗಳ ವಿವರ

| SL NO | DISTRICT | OB | RECEIPTS | TOTAL | DISPOSAL | TOTAL PENDENCY | REVENUE PENDENCY | SURVEY PENDENCY |
|---|---|---|---|---|---|---|---|---|
| 1 | ಬೆಳಗಾವ | 31130 | 53539 | 84669 | 56032 | 28637 | 6958 | 21679 |
| 2 | ಬಾಗಲಕೋಟೆ | 8039 | 28694 | 36733 | 31439 | 5294 | 1030 | 4264 |
| 3 | ಬಿಜಾಪುರ | 19940 | 28455 | 48395 | 34037 | 14358 | 4510 | 9848 |
| 4 | ಗುಲ್ಬರ್ಗ | 21201 | 23769 | 44970 | 27276 | 17694 | 8009 | 9685 |
| 5 | ಬೀದರ್ | 14003 | 17173 | 31176 | 19707 | 11469 | 6853 | 4616 |
| 6 | ರಾಯಚೂರು | 19190 | 24930 | 44120 | 22132 | 21988 | 11804 | 10184 |
| 7 | ಕೊಪ್ಪಳ | 10489 | 17861 | 28350 | 17224 | 11126 | 5775 | 5351 |
| 8 | ಗದಗ | 6709 | 15872 | 22581 | 17635 | 4946 | 1093 | 3853 |
| 9 | ಧಾರವಾಡ | 8507 | 22551 | 31058 | 25533 | 5525 | 1302 | 4223 |
| 10 | ಉತ್ತರಕನ್ನಡ | 6737 | 19395 | 26132 | 20096 | 6036 | 773 | 5263 |
| 11 | ಹಾವೇರಿ | 15768 | 25636 | 41404 | 29037 | 12367 | 922 | 11445 |
| 12 | ಬಳ್ಳಾರಿ | 12870 | 30746 | 43616 | 32344 | 11272 | 4823 | 6449 |
| 13 | ಚಿತ್ರದುರ್ಗ | 10974 | 25648 | 36622 | 26719 | 9903 | 2745 | 7158 |
| 14 | ದಾವಣಗೆರೆ | 23767 | 33084 | 56851 | 39858 | 16993 | 7087 | 9906 |
| 15 | ಶಿವಮೊಗ್ಗ | 12149 | 26109 | 38258 | 25981 | 12277 | 5583 | 6694 |
| 16 | ಉಡುಪಿ | 10754 | 28084 | 38838 | 27048 | 11790 | 7496 | 4294 |
| 17 | ಚಿಕ್ಕಮಗಳೂರು | 9498 | 21318 | 30816 | 21674 | 9142 | 3863 | 5279 |
| 18 | ತುಮಕೂರು | 19956 | 54441 | 74397 | 54355 | 20042 | 12220 | 7822 |
| 19 | ಕೋಲಾರ | 10905 | 21298 | 32203 | 21510 | 10693 | 4647 | 6046 |
| 20 | ಬೆಂಗಳೂರು | 19943 | 18148 | 38091 | 19526 | 18565 | 9425 | 9140 |
| 21 | ಬೆಂಗಳೂರು ಗ್ರಾ | 13999 | 25824 | 39823 | 28547 | 11276 | 5241 | 6035 |
| 22 | ಮಂಡ್ಯ | 11559 | 47868 | 59427 | 44637 | 14790 | 8348 | 6442 |
| 23 | ಹಾಸನ | 16547 | 47099 | 63646 | 49453 | 14193 | 5015 | 9178 |
| 24 | ದಕ್ಷಿಣ ಕನ್ನಡ | 10982 | 26787 | 37769 | 25077 | 12692 | 9224 | 3468 |
| 25 | ಕೊಡಗು | 1214 | 7400 | 8614 | 7462 | 1152 | 130 | 1022 |
| 26 | ಮೈಸೂರು | 15253 | 36940 | 52193 | 39394 | 12799 | 3905 | 8894 |
| 27 | ಚಾಮರಾಜನಗರ | 2581 | 16819 | 19400 | 16613 | 2787 | 1436 | 1351 |
| 28 | ಚಿಕ್ಕಬಳ್ಳಾಪುರ | 6186 | 20866 | 27052 | 20980 | 6072 | 3082 | 2990 |
| 29 | ರಾಮನಗರ | 17235 | 31362 | 48597 | 32580 | 16017 | 5104 | 10913 |
| 30 | ಯಾದಗಿರ್ | 10187 | 12364 | 22551 | 12351 | 10200 | 5322 | 4878 |
| | **TOTAL** | **398272** | **810080** | **1208352** | **846257** | **362095** | **153725** | **208370** |